ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 19–11–2019

# ಪತ್ರಿಕಾ ಆಮಂತ್ರಣ

**1. Valedictory Function ;**
**Department of Skill Development Entrepreneurship and Livelihood**
**Bengaluru Skill 2019**

**Chief Guest :**

**Rajesh Agarwal IAS.,**
**Director General - Training**
**Ministry of Skill Development and Entrepreneurship Govt. of India**

**Guest of Honour :**

**Capt. Manivannan P. IAS.,**
**Secretary to Government Labour Department Govt of Karnataka**

**Date : 20-11-2019 Wednesday Time : 4-00 p.m.**
**Venue : Bengaluru Palace Skill Hall**

# ಪತ್ರಿಕಾ ಪ್ರಕಟಣೆ

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 2018-19ನೇ ಸಾಲಿನಲ್ಲಿ ಕನ್ನಡದಲ್ಲಿ ಎಂ.ಫಿಲ್ ಮತ್ತು ಪಿಹೆಚ್‌ಡಿ ಪದವಿ ಪಡೆದ ಮಹಾಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಸಹಾಯಧನ ಹಾಗೂ ಸಾಮಾನ್ಯ ಅಭ್ಯರ್ಥಿಗಳಿಗಾಗಿ ಸೃಜನೇತರ ಕನ್ನಡ ಗ್ರಂಥಗಳಿಗೆ ಸಹಾಯಧನ ಯೋಜನೆಗಾಗಿ ಅರ್ಜಿ ಆಹ್ವಾನಿಸಿದೆ.

ಕನ್ನಡದಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ ಪದವಿ ಪಡೆದ ಮಹಾಪ್ರಬಂಧಗಳ ಹಸ್ತಪ್ರತಿ ಮುದ್ರಣಕ್ಕೆ ಸಹಾಯಧನ ಯೋಜನೆಗಾಗಿ ಇಲಾಖೆಯ ಜಾಲತಾಣ www.kannadasiri.in ನಿಂದ ಆನ್‌ಲೈನ್ ಮೂಲಕ ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳು 2018-19 ನೇ ಸಾಲಿನಲ್ಲಿ ಪ್ರಕಟಿತ ಸೃಜನೇತರ ಕನ್ನಡ ಗ್ರಂಥಗಳಿಗೆ ಧನಸಹಾಯಕ್ಕಾಗಿ ಇಲಾಖೆಯ ಜಾಲತಾಣ www.kannadasiri.in ನಿಂದ ಅರ್ಜಿ ನಮೂನೆ ಪಡೆದು ನೇರವಾಗಿ ಇಲಾಖೆಗೆ ಸಲ್ಲಿಸಬಹುದಾಗಿದೆ.

ಡಿಸೆಂಬರ್ 14 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

## "ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್" ತರಬೇತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ತರಬೇತಿ ಸಂಸ್ಥೆಯನ್ನು ನಡೆಸುತ್ತಿದ್ದು, ಈ ತರಬೇತಿ ಸಂಸ್ಥೆಯ ಮೂಲಕ ಸಹಕಾರ ಸಂಘ ಸಂಸ್ಥೆ/ಸಹಕಾರ ಇಲಾಖೆ/ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ "6 ತಿಂಗಳು/ 180 ದಿನಗಳ" ಅವಧಿಯ " ಡಿಪ್ಲೋಮಾ ಇನ್ ಕೋ-ಅಪರೇಟಿವ್ ಮ್ಯಾನೇಜ್‌ಮೆಂಟ್ " ತರಬೇತಿಯನ್ನು ದಿನಾಂಕ : 01-01-2020 ರಿಂದ ಪ್ರಾರಂಭಿಸಲಾಗುತ್ತಿದೆ. ಈ ತರಬೇತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳಿಂದ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಕೊನೆಯ ದಿನಾಂಕ: 30.11.2019 ಆಗಿರುತ್ತದೆ.

ತರಬೇತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಹಕಾರ ಸಂಘ/ಸಹಕಾರ ಇಲಾಖೆ/ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ವೇತನ ಪಡೆಯುವ ನೌಕರರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೆ ನಿಯಮಿತವಾಗಿ ಅವಕಾಶವನ್ನು ಕಲ್ಪಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ

ಶೇಕಡ 18 ರಷ್ಟು ಸ್ಥಾನವನ್ನು ತರಬೇತಿಗಾಗಿ ಮೀಸಲಿರಿಸಲಾಗಿದೆ. ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ, ಸಹಕಾರ ಸಂಘಗಳಲ್ಲಿ ಒಂದು ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯೂ ಸಹ ತರಬೇತಿ ಪಡೆಯಲು ಅರ್ಹರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳು ಮಾತ್ರ ತರಬೇತಿಗಾಗಿ ಅರ್ಜಿ ಸಲ್ಲಿಸಬಹುದು. ಈ ತರಬೇತಿಯಲ್ಲಿ ಅಭ್ಯರ್ಥಿಗಳಿಗೆ ಮಾಹೆಯಾನ ರೂ 400/- ಗಳ ಶಿಷ್ಯವೇತನವನ್ನು ನೀಡಲಾಗುವುದು.

ನಿರುದ್ಯೋಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ "6 ತಿಂಗಳು/ 180 ದಿನಗಳ" ಅವಧಿಯ "ಡಿಪ್ಲೋಮಾ ಇನ್ ಕೋ-ಅಪರೇಟಿವ್ ಮ್ಯಾನೇಜ್‌ಮೆಂಟ್" ತರಬೇತಿಯನ್ನು ಸಹ ನೀಡಲಾಗುವುದು. ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಿಂದ ತರಿಸಿಕೊಳ್ಳಲಾಗುವುದು ಮತ್ತು ಈ ವರ್ಗದ ಅಭ್ಯರ್ಥಿಗಳು ಆಯಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರವರ ಮೂಲಕ ಅರ್ಜಿಗಳನ್ನು ದಿನಾಂಕ: 30-11-2019 ರೊಳಗಾಗಿ ಸಲ್ಲಿಸಬಹುದು. ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ವರ್ಷಗಳಾಗಿರಬೇಕು. ಗರಿಷ್ಠ 30 ವರ್ಷಗಳು ಮೀರಿರಬಾರದು. ಈ ಅಭ್ಯರ್ಥಿಗಳಿಗೆ ಮಾಹೆಯಾನ ರೂ 500/- ಶಿಷ್ಯವೇತನವನ್ನು ನೀಡಲಾಗುವುದು.

ಪ್ರಸಕ್ತ ತರಬೇತಿ ಅಧಿವೇಶನವು ದಿನಾಂಕ: 01-01-2020 ರಿಂದ ಪ್ರಾರಂಭವಾಗಲಿದೆ. ಡಿ.ಸಿ.ಎಂ. ತರಬೇತಿಯ ಅರ್ಜಿ ಫಾರಂ ಮತ್ತು ವಿವರಣಾ ಪುಸ್ತಕವನ್ನು ತರಬೇತಿ ಸಂಸ್ಥೆಯಿಂದ ಪಡೆಯಬಹುದು. ಅರ್ಜಿ ಮತ್ತು ವಿವರಣಾ ಪುಸ್ತಕದ ಶುಲ್ಕ ರೂ 75/- ರೂ. (ರೂ ಎಪ್ಪತ್ತೈದು ಮಾತ್ರ) ಗಳನ್ನು ನಗದಾಗಿ ಪಾವತಿಸಿ ತರಬೇತಿ ಸಂಸ್ಥೆಯಲ್ಲಿ ಅಥವಾ ಜಿಲ್ಲಾ ಸಹಕಾರ ಯೂನಿಯನ್ ಕಚೇರಿಯಲ್ಲಿ ಪಡೆಯಬಹುದು. ಅಂಚೆ ಮೂಲಕ ಪಡೆಯಲು ಇಚ್ಛಿಸುವವರು ರೂ. 125/- (ಒಂದು ನೂರ ಇಪ್ಪತ್ತೈದು ಮಾತ್ರ)ಗಳ ಡಿ.ಡಿ. ಮೂಲಕ ಪಾವತಿಸಿ ಪಡೆಯಬಹುದಾಗಿದೆ. ತರಬೇತಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.11.2019 ರ ಒಳಗಾಗಿ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿಮಾಡಿ ಪ್ರಾಂಶುಪಾಲರು, ಕೆ.ಐ.ಸಿ.ಎಂ. ಬೆಂಗಳೂರು ಸಹಕಾರ ಭವನ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಕಟ್ಟಡ, ನಂ 1/3,2ನೇ ಮಹಡಿ, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9902189872, 9535632320. 9964002461 ಸಂಪರ್ಕಿಸಬಹುದಾಗಿದೆ.

## ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿಯು ಚಿತ್ರಕಲೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಚಿತ್ರಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ಬಾರಿ ಮಾತ್ರ ವಿದ್ಯಾರ್ಥಿ ವೇತನವನ್ನು (ಔಟಿಜ ಖಿಟಜ ಖುಛಿಊಟಚಿಡಿಜ) ನೀಡಲು ನಿರ್ಧರಿಸಿದೆ.

ಕರ್ನಾಟಕದ ಅಂಗೀಕೃತಗೊಂಡ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಪಟ್ಟ ಬಿ.ಎಫ್.ಎ/ಎಂ.ಎಫ್.ಎ. ಚಿತ್ರಕಲಾ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಚಿತ್ರಕಲಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ಕರ್ನಾಟಕದವರಾಗಿದ್ದು, ವಯೋಮಿತಿ 20 ರಿಂದ 25 ವರ್ಷ ಒಳಗಿರಬೇಕು. ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಪೂರ್ಣ ವಿವರಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಎರಡು ಭಾವಚಿತ್ರ ಹಾಗೂ 5*6 ಅಳತೆಯ ಎರಡು ಚಿತ್ರಕಲಾಕೃತಿಗಳ ಛಾಯಾಚಿತ್ರಗಳು ಸೇರಿದಂತೆ ಈ ಹಿಂದೆ ವಿದ್ಯಾರ್ಥಿ ವೇತನ ಪಡೆದಿಲ್ಲವೆಂದು ಇದೇ ಮೊದಲ ಸಲವೆಂದು ಸಂಬಂಧಪಟ್ಟ ಕಲಾವಿದ್ಯಾಲಯದ ಮುಖ್ಯಸ್ಥರ/ಪ್ರಾಚಾರ್ಯರ ದೃಢೀಕರಣದೊಂದಿಗೆ ದಿನಾಂಕ: 15-12-2019 ರ ಒಳಗಾಗಿ ಅಕಾಡೆಮಿಗೆ ಅರ್ಜಿಯನ್ನು ಸಲ್ಲಿಸಬಹುದು.

ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇವರಿಗೆ ತಲುಪಿಸಲು ಕೋರಿದೆ. ಕೊನೆಯ ದಿನಾಂಕದ ನಂತರ ಬಂದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ **www.lalitkalakarnataka.org** ಇ-ಮೇಲ್ **lalitkala.karnataka.@gmail.com** ಹಾಗೂ ದೂರವಾಣಿ ಸಂಖ್ಯೆ 080-22480297 ಸಂಪರ್ಕಿಸಬಹುದಾಗಿದೆ.

## ಅರಣ್ಯ ಪ್ರಬೇಧಗಳ ಅಭಿವೃದ್ಧಿಗೆ ಐಸಿಎಫ್‌ಆರ್‌ಇಯಿಂದ ವಿಶೇಷ ಕೊಡುಗೆ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಭಾರತದ ಕಾಡುಗಳು ಬಹುಮುಖಿ ತೊಂದರೆಗಳನ್ನು ಎದುರಿಸುತ್ತಿದೆ. ಅರಣ್ಯ ಸಂಬಂಧಿ ಸಮಸ್ಯೆಗಳನ್ನು ಗಮನಿಸಲು ಮತ್ತು ಕಾಡುಗಳ ಗುಣಮಟ್ಟವನ್ನು ಸುಧಾರಿಸಲು, ಐಸಿಎಫ್‌ಆರ್‌ಇ ಹಲವು ಉಪಕ್ರಮಗಳ ಅನುಷ್ಠಾನಕ್ಕೆ ಮುಂದಾಗಿದೆ. ಬಿದಿರು, ಶ್ರೀಗಂಧ, ಮರ ಸುಧಾರಣೆ, ತೇಗ, ಶಿಶೆಮ್ ಮರ, ಆಕ್ರಮಣಕಾರಿ ಪ್ರಬೇಧಗಳು, ಕಾಲ್ಗಿಚ್ಚುಗಳು, ಮರ ವಿಜ್ಞಾನ, ಅರಣ್ಯ ಜಲವಿಜ್ಞಾನ, ಅರಣ್ಯ ಪರಿಸರ ವ್ಯವಸ್ಥೆ ಸೇವೆಗಳು, ಕಾಡುಗಳು ಮತ್ತು ಇತರ ಹೊರಹೊಮ್ಮುತ್ತಿರುವ ಪ್ರದೇಶಗಳ ಮೇಲೆ ಹವಾಮಾನಚಾಲಿತ ಪರಿಣಾಮಗಳು ಮುಂತಾದ ವಿಷಯಗಳಲ್ಲಿ ಅಖಿಲ ಭಾರತ ಸಮನ್ವಯದ ಸಂಶೋಧನಾ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಹವಾಮಾನ ಬದಲಾವಣೆ ಮತ್ತು ಜಾಗತಿಕ ತಾಪಮಾನ ಹೆಚ್ಚಳಗಳು ಜಾಗತಿಕವಾಗಿ ಮಾನವ ಜನಸಂಖ್ಯೆಗೆ ಪ್ರಮುಖ ಬೆದರಿಕೆಗಳಾಗಿವೆ. ಇವು ತಾಪಮಾನಗಳ ಮಾದರಿ, ಪ್ರವಾಹಗಳು, ಬರಗಳು, ಮಳೆ ಬೆಳೆ ಉತ್ಪಾದನೆ ಮುಂತಾದವುಗಳ ಮೇಲೆ ಅನಾದರಣಿಯ ವಾತಾವರಣವನ್ನು ಉಂಟು ಮಾಡುತ್ತಿವೆ. ಐಸಿಎಫ್‌ಆರ್‌ಇ ನೀಡಿರುವ ವೈಜ್ಞಾನಿಕ ಸಲಹೆಗಳೊಂದಿಗೆ ಹವಾಮಾನ ಬದಲಾವಣೆವೊಡ್ಡಿರುವಂತಹ ಸವಾಲುಗಳನ್ನು ನಿಭಾಯಿಸಲು ಮತ್ತು ಈ ಮೇಲೆ ಹೇಳಿದ ಪರಿಣಾಮಗಳನ್ನು ಮಿತಗೊಳಿಸುವ ಹಲವಾರು

ಕ್ರಮಗಳನ್ನು ಹಾಗೂ ಅಳವಡಿಕೆಯ ಕ್ರಮಗಳನ್ನು ಭಾರತ ಸರ್ಕಾರ ಕೈಗೊಂಡಿದೆ. ಅರಣ್ಯನಾಶದಿಂದ ಉಂಟಾಗುವ ಪರಿಣಾಮಗಳನ್ನು ಕಡಿಮೆ ಮಾಡುವಂತಹ ರಾಷ್ಟ್ರೀಯ ಆರ್ಇಡಿಡಿ ಯೋಜನೆಗಳನ್ನು ಈ ಮಂಡಳಿ ಸಿದ್ಧಪಡಿಸಿದೆ. ಅರಣ್ಯ ಮತ್ತು ಮರ ಪ್ರಬೇಧಗಳ ಕಾರ್ಬನ್ ಸೆಕ್ವೆಸ್ಟ್ರೇಷನ್ ಪೆನಿಟೆನ್ಷಿಯಲ್ ಪುನರ್ ಸ್ಥಾಪನೆ ಹವಾಮಾನ ಬದಲಾವಣೆಯ ಯುಗದಲ್ಲಿ ಮತ್ತೊಂದು ಪ್ರಮುಖ ಉಪಕ್ರಮವಾಗಿದೆ. ಈ ಸವಾಲಿನಡಿ 2013 ರ ಹೊತ್ತಿಗೆ 25 ದಶಲಕ್ಷ ಹೆಕ್ಟೇರ್‌ಗಳಷ್ಟು ಅವನತಿಗೊಂಡಿರುವ ಭೂಪ್ರದೇಶವನ್ನು ಪುನರುಜ್ಜೀವನಗೊಳಿಸಲು ಭಾರತ ಸರ್ಕಾರ ಮುಂದಾಗಿತ್ತು. ಇದನ್ನು ಹೊಸದಿಲ್ಲಿಯಲ್ಲಿ ಸೆಪ್ಟೆಂಬರ್ 2019 ರಲ್ಲಿ ನಡೆದ ಸಿಒಪಿ ಸಭೆಯಲ್ಲಿ 26 ದಶಲಕ್ಷ ಹೆಕ್ಟೇರ್‌ಗೆ ಹೆಚ್ಚಿಸಲಾಗಿದೆ. ಜೊತೆಗೆ ಇಂಗಾಲದ ಡೈಆಕ್ಸೈಡ್ ಅನ್ನು 2.5 ರಿಂದ 3.00 ಶತಕೋಟಿ ಟನ್‌ಗಳಿಗೆ ಸೀಮಿತವಾಗಿಸಲು ಕೂಡ ಭಾರತ ಸರ್ಕಾರ ಬದ್ಧತೆ ಹೊಂದಿದೆ. ಈ ಗುರಿಗಳನ್ನು ಸಾಧಿಸಲು ಐಎನ್‌ಡಿಸಿ, ಎಂಒಇಎಫ್ ಮತ್ತು ಸಿಸಿ ಜಿಒಐ&ಐಸಿಎಫ್ಆರ್ಇಗಳು ಹಲವಾರು ಕ್ರಮಗಳನ್ನು ಕೈಗೊಂಡಿದೆ.

ಐಸಿಎಫ್ಆರ್ಇ ಈಗಾಗಲೇ ಗಂಗಾನದಿಯ ಪಾತ್ರದಲ್ಲಿ ಅರಣ್ಯ ಹಸ್ತಕ್ಷೇಪಕ್ಕಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ಸಲ್ಲಿಸಿದ್ದು, ಇದನ್ನು ಕುರಿತು ಭಾರತ ಸರ್ಕಾರ ಬಹಳಷ್ಟು ಮೆಚ್ಚುಗೆ ವ್ಯಕ್ತಪಡಿಸಿದೆ. ನೀರಿನ ಹರಿವು ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಐಸಿಎಫ್ಆರ್ಇ ಕೃಷ್ಣ ಮತ್ತು ಕಾವೇರಿ ಸೇರಿದಂತೆ ದೇಶದ 13 ಪ್ರಮುಖ ನದಿಗಳ ಪಾತ್ರಗಳಲ್ಲಿ ಅರಣ್ಯ ಹಸ್ತಕ್ಷೇಪಕ್ಕಾಗಿ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುತ್ತಿದೆ. ಶ್ರೀಗಂಧ ಮತ್ತು ರಕ್ತಚಂದನಗಳಂತಹ ಮರದ ಪ್ರಬೇಧಗಳು ಅತ್ಯಂತ ಹೆಚ್ಚಿನ ಮೌಲ್ಯ ಹೊಂದಿರುವ ಮರಗಳಾಗಿವೆ.

ಅಲ್ಲದೆ, ಜಾಗತಿಕ ಮಾರುಕಟ್ಟೆಗಳಲ್ಲಿ ಬೃಹತ್ ಬೇಡಿಕೆ ಹೊಂದಿದ್ದು, ಉತ್ತಮ ಬೆಲೆ ತರುತ್ತವೆ. ಆದ್ದರಿಂದ ಈ ಮರಗಳನ್ನು ಕಾನೂನುಬಾಹಿರವಾಗಿ ಕತ್ತರಿಸಿ ದುಷ್ಕರ್ಮಿಗಳು ಕಳ್ಳಸಾಗಣೆ ಮಾಡುತ್ತಾರೆ. ಐಸಿಎಫ್ಆರ್ಇ/ಇಡಬ್ಲ್ಯುಎಸ್‌ಟಿ ಈ ಮರಗಳಿಗಾಗಿ ವಿದ್ಯುನ್ಮಾನ ಸಂರಕ್ಷಣಾ ವ್ಯವಸ್ಥೆ ಮತ್ತು ಮೈಕ್ರೊ ಚಿಪ್‌ಗಳನ್ನು ಹಿತಾಚಿ ಸಹಯೋಗದಲ್ಲಿ ಅಭಿವೃದ್ಧಿಪಡಿಸಿರುವ ಪ್ರಕ್ರಿಯೆಯಲ್ಲಿದೆ. ಈ ಚಿಪ್‌ಗಳನ್ನು ಮರಗಳ ಸಂರಕ್ಷಣೆಗಾಗಿ ಅವುಗಳ ತೊಗಟೆಯೊಳಗೆ ಅಳವಡಿಸಬಹುದಾಗಿದೆ. ರಸ್ತೆಗಳನ್ನು ಅಗಲವಾಗಿಸುವ ಕಾರ್ಯಗಳಂತಹ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಸಾವಿರಾರು ಮರಗಳನ್ನು ಕತ್ತರಿಸಬೇಕಾಗುತ್ತದೆ. ಇದು ಪರಿಸರ ಮತ್ತು ಹವಾಮಾನದ ವ್ಯತಿರಿಕ್ತ ಪರಿಣಾಮ ಉಂಟು ಮಾಡುತ್ತಿದೆ. ಐಸಿಎಫ್ಆರ್ಇ/ಐಡಬ್ಲ್ಯುಎಸ್‌ಟಿ ಈಗ ವೋಲ್ವೊ ಟ್ರಕ್ಸ್ ಜೊತೆಗೆ ಸಹಭಾಗಿತ್ವದಲ್ಲಿ ಮರಗಳ ಸ್ಥಳಾಂತರಕ್ಕಾಗಿ ಪ್ರಾಮಾಣಿತ ಕಾರ್ಯಚರಣೆ ಶಿಷ್ಟಾಚಾರಗಳನ್ನು ಅಭಿವೃದ್ಧಿಪಡಿಸುತ್ತಿದೆ.

ಸ್ಥಳೀಯ ನಿವಾಸಿಗಳ ಜೀವನಾಧಾರ ಮತ್ತು ಭೂಮಿಯ ಉತ್ಪಾದಕತೆಯ ಮೇಲೆ ಪರಿಣಾಮ ಬೀರುವ ಪ್ರಮುಖ ತೊಂದರೆಗಳೆಂದರೆ ಬರಡು ಭೂಮಿಯ ಅವನತಿ ಮತ್ತು ಮರಭೂಮಿಯಾಗುವುದಾಗಿದೆ. ಮರುಭೂಮಿಯಾಗುವ ಪ್ರಕ್ರಿಯೆಯ ವಿರುದ್ಧ ಹೋರಾಡಲು ಹಾಗೂ ವೈಜ್ಞಾನಿಕ ಹಸ್ತಕ್ಷೇಪಗಳ ಮೂಲಕ ಭೂಮಿಯ ಅವನತಿಯನ್ನು ಸರಿಪಡಿಸಲು ದಕ್ಷಿಣ–ದಕ್ಷಿಣ ಸಹಕಾರವನ್ನು ಐಸಿಎಫ್ಆರ್ಇ ಕೈಗೊಳ್ಳುತ್ತಿದೆ.

ಐಡಬ್ಲ್ಯುಎಸ್‌ಟಿ ಏಷ್ಯಾ ಪ್ರದೇಶದಲ್ಲಿ ಮುಖ್ಯವಾಗಿ ಮರವಿಜ್ಞಾನ ಮತ್ತು ತಂತ್ರಜ್ಞಾನಗಳ ಮೇಲೆ ಕೆಲಸ ಮಾಡುತ್ತಿರುವ ಪ್ರಮುಖ ಸಂಸ್ಥೆಯಾಗಿದೆ. ಮರ ಆಧಾರಿತ ಕೈಗಾರಿಕೆಗಳ ಲಾಭಕ್ಕಾಗಿ ಅಲ್ಲದೆ, ಮರ ಸಂಬಂಧಿ ಕ್ಷೇತ್ರವನ್ನು ಪ್ರೋತ್ಸಾಹಿಸಲು ಮರ, ಪ್ಲಾಸ್ಟಿಕ್ ಮಿಶ್ರಣ ವಸ್ತು, ಪಾರದರ್ಶಕ ಮರ, ಥರ್ಮಲ್ ವುಡ್ ಮತ್ತು

ರಾಸಾಯನಿಕವಾಗಿ ಮಾರ್ಪಡಿಸಲಾದ ಮರದಂತಹ ಹಲವಾರು ತಂತ್ರಜ್ಞಾನಗಳು/ಉತ್ಪನ್ನಗಳನ್ನು ಸಂಸ್ಥೆ ಅಭಿವೃದ್ಧಿಪಡಿಸಿದೆ.

## ಮಹಿಳೆಯರಿಗೆ ಅರಿವು ಮೂಡಿಸುವ ಕಾರ್ಯಕ್ರಮ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಶಾಸನಬದ್ಧ ಆಯೋಗವಾಗಿದ್ದು, ಆಯೋಗದಲ್ಲಿ ಪ್ರತಿ ದಿನ ನೂರಾರು ಮಹಿಳಾ ದೂರರ್ಜಿಗಳು ಸ್ವೀಕೃತವಾಗುತ್ತಿದೆ. ರಾಜ್ಯದಲ್ಲಿ ಮಹಿಳೆಯರ ರಕ್ಷಣೆ ಮತ್ತು ಮಹಿಳೆಯರ ಹಕ್ಕುಗಳ ಬಗ್ಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು **1996** ರಿಂದಲೂ ಹೆಚ್ಚಿನ ಆಧ್ಯತೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಹಿಳೆಯರ ರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ಕಾನೂನುಗಳನ್ನು ಹೊರತಂದಿದ್ದು, ಈ ಬಗ್ಗೆ ಮಹಿಳೆಯರಿಗೆ ಹೆಚ್ಚಿನ ಅರಿವು ಮೂಡಿಸಬೇಕಾಗಿದೆ.

ರಾಜ್ಯದಲ್ಲಿ "ಆ್ಯಸಿಡ್" ದಾಳಿ ಪ್ರಕರಣಗಳು ಮರುಕಳಿಸದಂತೆ ಹಾಗೂ ಕೆಲಸದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ತಡೆಗಟ್ಟುವ ಬಗ್ಗೆ ಮತ್ತು ವರದಕ್ಷಿಣೆ, ಅತ್ಯಾಚಾರ, ಸೈಬರ್ ಕ್ರೈಂ ಮುಂತಾದ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಕಾನೂನಿನಲ್ಲಿರುವ ಶಿಕ್ಷೆ ಮತ್ತು ಮಹಿಳೆಯರಲ್ಲಿ ಅರಿವು ಮೂಡಿಸಲು ಹಾಗೂ ಮಹಿಳೆಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರಕುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದಲ್ಲಿ ಇದರ ಸದುಪಯೋಗವನ್ನು ರಾಜ್ಯ ಮಹಿಳೆಯರು ಪಡೆಯಲಿದ್ದಾರೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

## ನೇಮಕಾತಿಗಾಗಿ ಸಂದರ್ಶನ

ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ: 23-03-2018 ರ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರ 03 ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ದಿನಾಂಕ: 28-11-2019 ರಂದು ಬೆಳಿಗ್ಗೆ 9.30 ಗಂಟೆಗೆ ಆಯೋಗದ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ನಿಗದಿಪಡಿಸಿದೆ.

ಅಭ್ಯರ್ಥಿಗಳಿಗೆ ಸಂದರ್ಶನ ಸೂಚನಾ ಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ. ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ http://kpsc.kar.nic.in/Eligibility List ಗಳಲ್ಲಿ ವೀಕ್ಷಿಸಬಹುದಾಗಿದೆ.